# ಅದ್ಭುತಗಳು ದೇವರ ವಾಕ್ಯವನ್ನು ದೃಢೀಕರಿಸುತ್ತವೆ

ದೇವರು ಮಾಡಿರುವ ಸಕಲ ಅದ್ಭುತ ಕಾರ್ಯಗಳಲ್ಲಿ, ಅವುಗಳ ಮೂಲಕ ಯಾರ ಪಾಪಗಳು ಕ್ಷಮಾಪಣೆಯಾಗಿರುವದಿಲ್ಲ! ಇದಕ್ಕಾಗಿ ದೇವರು ಅದ್ಭುತಕಾರ್ಯಗಳನ್ನು ಬಳಸಲಿಲ್ಲ.

ದೇವರ ವಾಕ್ಯವನ್ನು ಸಾಕ್ಷಿಕರಿಸುವದಕ್ಕಾಗಿ ಮತ್ತು ಜನರ ಹೃದಯಗಳಿಗೆ ತರುವದಕ್ಕಾಗಿ ಅದ್ಭುತಗಳನ್ನು ಬಳಸಲಾಯಿತು. ಅದ್ಭುತಗಳು ಯಾವುದೇ ವ್ಯಕ್ತಿಗಳನ್ನು ಬದಲಾಯಿಸದೇ ಹೋದರೂ; ದೇವರಿಂದ ಹೊರಟ ಸತ್ಯಗಳು ಹೃದಯಗಳನ್ನು ಬದಲಾಯಿಸಿದವು. ಸತ್ಯವೇದದ ಇತಿಹಾಸದಲ್ಲಿ, ಅದ್ಭುತಗಳನ್ನು ಮಿತಿಯಾಗಿ ಪ್ರಯೋಗಿಸಲಾಗಿತ್ತು ಎಂದು ಸತ್ಯವೇದ ವಿದ್ಯಾರ್ಥಿಗಳು ಗ್ರಹಿಸಿಕೊಂಡಿರುವರು. ಮೂರು ವಿವಿಧ ಸಮಯದಲ್ಲಿ ಅದ್ಭುತಗಳು ಗುರುತರವಾಗಿ ಕಾರ್ಯ ನಿರ್ವಹಿಸಿವೆ.

(1) ಮೋಶೆಯ ಕಾಲ ಮತ್ತು ಕೆಲಸದ ಸಮಯದಲ್ಲಿ, ದೇವರು ಮಾಡಿದ ಅದ್ಭುತಗಳನ್ನು ನೆನಪು ಮಾಡಿಕೊಳ್ಳಿರಿ. ಯೆಹೋಶುವನು ಕಾನಾನ್ ದೇಶವನ್ನು ವಶಪಡಿಸಿಕೊಳ್ಳುವವರೆಗೆ ಮತ್ತು ಅಬ್ರಹಾಮನು ಸಹ ತನ್ನ ಪ್ರಯಾಣದಲ್ಲಿ, ಹಾಗೂ ಇಸ್ರಾಯೇಲ ಜನಾಂಗವು ಉದ್ಭವವಾಗುವವರೆಗೆ, ಆ ಅದ್ಭುತಗಳು ಅವರಿಗೆ ಮಾರ್ಗದರ್ಶನ ನೀಡುತ್ತಿದ್ದವು. ಈ ಸನ್ನಿವೇಶದಲ್ಲಿ ಅನೇಕ ಅದ್ಭುತಗಳು ದಾಖಲಾಗಿವೆ. ಅವರು ವಾಗ್ದಾನದ ದೇಶವನ್ನು ಸೇರಿಕೊಂಡ ತರುವಾಯ ಅದ್ಭುತಗಳು ಕಡಿಮೆಯಾದವು.

(2) ಎರಡನೇಯದಾಗಿ ಪ್ರವಾದಿಗಳ ಕಾಲದಲ್ಲಿ ಅದ್ಭುತಗಳು ಜರುಗಿದವು: ಎಲಿಯ, ಎಲೀಷ, ಯೆಶಾಯ, ದಾನಿಯೇಲ, ಯಹೆಜ್ಕೇಲ, ಮತ್ತು ಇತರೆ ಪ್ರವಾದಿಗಳ ಕಾಲದಲ್ಲಿ ದೇವರು ಅನೇಕ ಅದ್ಭುತ. ಕಾರ್ಯಗಳನ್ನು ಹಾಗೂ ಸೂಚಕ ಕಾರ್ಯಗಳನ್ನು ಮಾಡಿದನು. ಹಳೇ ಒಡಂಬಡಿಕೆಯ ಕಾಲದಲ್ಲಿ ಅವರು ಸೆರೆಯ ನಂತರ ಅದ್ಭುತಗಳು ಇಳಿಮುಖವಾದವು.

(3) ಯೇಸುವಿನ ಹಾಗೂ ಆತನ ಅಪೊಸ್ತಲರ ಕಾಲದಲ್ಲಿ, ಮೂರನೆಯದಾಗಿ ಅನೇಕ ಅದ್ಭುತಗಳು ಜರುಗಿದ್ದವು. ಆತನ ಸೇವಾ ಅವಧಿಯಲ್ಲಿ ಆತನೇ ಮೆಸ್ಸಿಯ ಹಾಗೂ ದೇವರೆಂದು ರುಜುವಾತುಪಡಿಸಲು ಅದ್ಭುತಗಳು ಜರುಗಿದವು. ಸುವಾರ್ತೆಯು ಇಡೀ ರೋಮಾಯದಲ್ಲಿ ಪ್ರಸರಿಸುವವರೆಗೆ, ಅದ್ಭುತಗಳು ಇಳಿಮುಖ ವಾಗುತ್ತಾ ಬಂದವು ಎಂದು ಹೊಸ ಒಡಂಬಡಿಕೆಯ ಸಮಯದಲ್ಲಿ[1] ಯಾವುದೇ ವಿಧವಾದ ಆದ್ಭುತಕಾರ್ಯಗಳ ಹಾಗೂ ಅದರ ಸೂಚನೆಗಳ ಸಿದ್ಧಾಂತಗಳನ್ನು ದಾಖಲು ಮಾಡಿರುವದಿಲ್ಲ.

ಈ ಮೂರು ಕಾಲಗಳ ನಂತರ, ಕೆಲವು ಸಂದರ್ಭಗಳಲ್ಲಿ ಮಾತ್ರ ಅದ್ಭುತಗಳನ್ನು ಕಾಣುತ್ತೇವೆ. ಆದರೆ, “ಅತಿಯಾದ ಅದ್ಭುತಕಾರ್ಯಗಳು” ಈ ತ್ರಿಕಾಲದಲ್ಲಿ ಮಾತ್ರ ಜರುಗಿದವು. ಈ ಸಮಯದಲ್ಲಿ ದೇವರು ತನ್ನ ನುಡಿಗಳನ್ನು ಲೋಕಕ್ಕೆ ಪ್ರಕಟಿಸುತ್ತಿದ್ದನು. ಅದ್ಭುತಗಳನ್ನು ದೇವರ ಸತ್ಯದ ಪ್ರಕಟನೆಯೊಂದಿಗೆ ತೋರಿಸಿರುವದು ಆಕಸ್ಮಿಕವಲ್ಲ. ಸತ್ಯವೇದದ ವಿದ್ಯಾರ್ಥಿಗಳು, ದೇವರು ನೀಡಿರುವ ಆತನ ಸತ್ಯಗಳ ಪ್ರಕಟನೆಯನ್ನು ಸೂಕ್ಷ್ಮ ದರ್ಶನದಿಂದ ನೋಡಿ, ಆ ಸೂಚಕ ಕಾರ್ಯಗಳನ್ನು ದೃಢಪಡಿಸಿಕೊಳ್ಳ ಬಹುದು. (1) ಮೋಶೆಯ ಮೂಲಕ ಧರ್ಮಶಾಸ್ತ್ರವನ್ನು ನೀಡಲಾಯಿತು. (2) ಮೆಸ್ಸೀಯನ ಮೂಲಕ ದೊರಕಬಹುದಾದ ರಕ್ಷಣೆಯ ಕುರಿತ ಪ್ರಕಟನೆಗಳನ್ನು ಪ್ರವಾದಿಗಳಿಗೆ ಮುಂತಿಳಿಸಲಾಯಿತು. (3) ಅಂತಿಮವಾಗಿ, ಕರ್ತನಾದಂಥ ಯೇಸು ಕ್ರಿಸ್ತನ ಸುವಾರ್ತೆಯ ಪ್ರಕಟನೆಯನ್ನು

ಯೇಸು ಕ್ರಿಸ್ತನು ಮತ್ತು ಆತನ ಅಪೊಸ್ತಲರು ಪ್ರಚುರಪಡಿಸಿದರು. ಯೇಸು ಕ್ರಿಸ್ತನ ಹಾಗೂ ಆತನ ಸಭಾ ಚರಿತ್ರೆಯ ಕಾಲದಲ್ಲಿ ಹೊಸ ಒಡಂಬಡಿಕೆಯಲ್ಲಿ ದಾಖಲಾಗಿರುವ ಅದ್ಭುತಗಳ ಸರಪಣಿಯ ಕುರಿತು ಈ ಅಧ್ಯಯನದಲ್ಲಿ ಗಮನಿಸಲಾಗುವದು.

## ಅದ್ಭುತಗಳ ವಾಗ್ದಾನ

ಒಂದು ಚಿಕ್ಕ ದೇಶವಾದ, ಪಾಲಿಸ್ತೇನಿನಲ್ಲಿ, ಯೇಸು ಕ್ರಿಸ್ತನು ಮೂರುವರೆ ವರ್ಷಗಳ ಕಾಲ ಬೋಧಿಸಿದನು. ಆತನು ಆರಿಸಿಕೊಂಡ ಹನ್ನೆರಡು ಜನರು ಆತನೊಂದಿಗೆ ಸಂಚರಿಸಿ, ಅವರು ಭವಿಷ್ಯದಲ್ಲಿ ಮಾಡಬೇಕಾದ ಉಪದೇಶವನ್ನು ಹಾಗೂ ತರಬೇತಿಯನ್ನು ಸ್ವೀಕರಿಸಿದರು. ಆತನು ಅವರಿಗೆ, ತಾನು ಅವರನ್ನು ಅನಾಥರನ್ನಾಗಿ ಬಿಟ್ಟುಹೋಗದೆ, ಆತನು ಹೊರಟುಹೋದ ನಂತರ, ಅವರನ್ನು ಸಂತೈಸಿ, ಸಹಾಯಿಸುವದಕ್ಕೆ ಪವಿತ್ರಾತ್ಮನನ್ನು ಕಳುಹಿಸುವನೆಂದು ವಾಗ್ದಾನ ಮಾಡಿದ್ದನು (ಯೋಹಾನ 14:25, 26). ಆ ಮೂರು ವರ್ಷಗಳಲ್ಲಿ ಯೇಸುವಿನ ಸಹವಾಸದಲ್ಲಿ ಕಲಿತುಕೊಂಡಿದ್ದ ವಿಚಾರಗಳನ್ನು ಅವರುಗಳು ಮರೆತು ಬಿಡಬಾರದೆಂದು, ಮತ್ತು ಆ ವಿಚಾರಗಳನ್ನು ಅವರಿಗೆ ನೆನಪು ಮಾಡುವದಕ್ಕೋಸ್ಕರ ಆ ಆತ್ಮನನ್ನು ಕಳುಹಿಸಿದನು.

ಉಳಿದಿರುವ ದೇವರ ಇತರೆ ಪ್ರಕಟನೆಗಳನ್ನು, ಆ ಸಂತೈಸುವ ಆತ್ಮನು ಅವರಿಗೆ ಬೋಧಿಸುವದಕ್ಕಿದ್ದನು. ಆತ್ಮನು ಅವರೆಲ್ಲರ ಆತ್ಮೀಕ ವಿದ್ಯಾಭ್ಯಾಸವನ್ನು ಪೂರ್ಣಮಾಡುವದಕ್ಕಿದ್ದನು. ಶಿಷ್ಯರು ಅರಿಯಬೇಕಾಗಿದ್ದ ಸಕಲ ವಿಚಾರಗಳನ್ನು ಯೇಸು ಪ್ರಥಮ ಹಂತದಲ್ಲಿಯೇ ಅವರಿಗೆ ಬೋಧಿಸಲಿಲ್ಲ (ಯೋಹಾನ 16:4), ಯಾಕೆಂದರೆ ಅಂತಹ ಪ್ರಕಟನೆಗಳನ್ನು ಅವರು ಅರಗಿಸಿಕೊಳ್ಳಲು ಸಾಧ್ಯವಿರಲಿಲ್ಲ (ಯೋಹಾನ 16:12). ಆತನು "ಸಾಂಕೇತಿಕ ಭಾಷೆಯನ್ನು ಪ್ರಯೋಗಿಸಿ'' (ಯೋಹಾನ 16:25) ಆತನು ತಿಳಿಸಿದ ಸತ್ಯಗಳನ್ನು ಅಪೊಸ್ತಲರು ಗ್ರಹಿಸುವದು ಕಷ್ಟಕರವೆಂದು ಮನವರಿಕೆ ಮಾಡಿದನು. ತಕ್ಕ ಕಾಲದಲ್ಲಿ, ಮುಂದಿನ ಶಿಷ್ಯರಿಗೆ ತಿಳಿಸಬೇಕಾದ ಸಿದ್ಧಾಂತಗಳನ್ನು ಆತ್ಮನು ತಿಳಿಸುವದಕ್ಕಿದ್ದನು.

ಈ ವಾಗ್ದನಗಳ ಪ್ರಕಾರ, ಯೇಸು, "ನಂಬುವವರಿಂದ, ಈ ಸೂಚಕ ಕಾರ್ಯಗಳು ಉಂಟಾಗುವವು'' (ಮಾರ್ಕ 16:17). ಈ ಸೂಚಕ ಕಾರ್ಯಗಳು, ಇವರ ಬೋಧನೆಯು ದೇವರಿಂದ ಬಂದದ್ದು ಎಂದು ತಿಳಿದು, ಅವರು ಹೇಳುತ್ತಿದ್ದ ಉಪದೇಶವನ್ನು ಜನರು ಸ್ವೀಕರಿಸುವಂತೆ ಮಾಡಿತು. ಈ ಸೂಚಕಕಾರ್ಯಗಳಲ್ಲಿ, ದೆವ್ವಗಳನ್ನು ಬಿಡಿಸುವದು, ಹೊಸ ಭಾಷೆಗಳನ್ನು ಮಾತನಾಡುವದು, ಹಾವುಗಳಿಂದ ಅಥವಾ ವಿಷಪದಾರ್ಥದಿಂದ ಯಾವ ಹಾನಿಯೂ ಉಂಟಾಗದು, ಸ್ವಸ್ಥಪಡಿಸುವಂಥ ಕ್ರಿಯೆಗಳು ಅಡಕವಾಗಿದ್ದವು (ಮಾರ್ಕ 16:17, 18).

ಈ ಅದ್ಭುತಗಳನ್ನು ಪ್ರಯೋಗ ಮಾಡುವ ಪ್ರಕ್ರಿಯೆಯನ್ನು ವೇಧಾಭ್ಯಾಸ ಮಾಡುವವರು ಅರಿಯಲಿಲ್ಲ ಎಂದು ಮಾರ್ಕನ ಸುವಾರ್ತೆಯಲ್ಲಿ ದಾಖಲು ಮಾಡಲಾಗಿದೆ! ಹಾಗೂ ಅವುಗಳನ್ನು ಆಧುನಿಕ "ಅದ್ಭುತಕಾರ್ಯಗಳನ್ನು ಮಾಡುವವರಂತೆ'' ಮಾಡಲಿಲ್ಲ. ದೇವರ ವಾಕ್ಯವನ್ನು ದೃಢಪಡಿಸುವ ಸಲುವಾಗಿ ಈ ಸೂಚಕ ಕಾರ್ಯಗಳು ಉಂಟಾದವು ಎಂದು ಮಾರ್ಕನು ತಿಳಿಸಿರುವನು ಮಾರ್ಕ 16:20.

## ಅದ್ಭುತಗಳ ಉದ್ದೇಶ

### ದೇವರ ವಾಕ್ಯವನ್ನು ದೃಢೀಕರಿಸುವದಕ್ಕಾಗಿ

ಈ ಸೂಚಕ ಕಾರ್ಯಗಳಲ್ಲಿ ಅಪೊಸ್ತಲರ ಉಪದೇಶವು ಒಳಗೊಂಡಿರುವದರಿಂದ, ಅಪೊಸ್ತಲರ ಕೃತ್ಯದಲ್ಲಿ ವಿವರಿಸುವ ಪ್ರಕಾರವಾಗಿ, ದೇವರು ಅದನ್ನು ಹೇಗೆ ಬಳಸಿದನೆಂಬ

ಗ್ರಹಿಕೆಯನ್ನು ನಾವುಗಳು ಪಡೆದುಕೊಳ್ಳಬೇಕು. ಜನರನ್ನು ಮನರಂಜನೆ ಪಡಿಸಲು ಅಥವಾ ಅವರನ್ನು ಉತ್ಪ್ರೇಕ್ಷೆ ಪಡಿಸಲು ಸೂಚಕ ಕಾರ್ಯಗಳನ್ನು ಬಳಸಲಾಗಲಿಲ್ಲ, ಅಥವಾ ಅದನ್ನು ಮಾಡುವವರನ್ನು ಮಹತ್ವದ ಸ್ಥಾನಕ್ಕೇರಿಸುವ, ಹಣ ಸಂಪಾದನೆ ಮಾಡುವ, ತಮ್ಮದೇ ಆದ ಸಾಮ್ರಾಜ್ಯವನ್ನು ಕಟ್ಟುವದಕ್ಕಾಗಲೀ ಅಥವಾ ರೋಗಿಗಳ ಲಾಭಕ್ಕಾಗಲೀ ಬಳಸಲಿಲ್ಲ.

ಪ್ರತಿ ಅದ್ಭುತಗಳಲ್ಲೂ, ಅಲೌಕಿಕವಾದ ದೇವರ ಶಕ್ತಿಯೊಂದಿಗೆ ದೇವರಿಂದ ಬಂದ ಸತ್ಯದ ಪ್ರಕಟನೆಗಳನ್ನು ಚಿತ್ತರಿಸಲಾಯಿತು. ಅಪೊಸ್ತಲರು ಸುವಾರ್ತೆಯ ಸತ್ಯವನ್ನು ಸ್ವೀಕರಿಸಿ ಅದನ್ನು ಬೋಧಿಸುವಾಗ, ಸ್ವಾಭಾವಿಕ ಪ್ರಪಂಚಕ್ಕೆ ಹೊರತಾಗಿರುವ ಅದ್ಭುತ ಗಳನ್ನು ಮಾಡಿದರು. ಇದರಿಂದ ಅವರು ದೇವರಿಂದ ಶಕ್ತಿಯನ್ನು ಹೊಂದಿದವರು, ಮತ್ತು ಅವರ ಬೋಧನೆಯು ದೇವರಿಂದ ಬಂದದ್ದೇ ಎಂದು ಸಾಬೀತುಪಡಿಸಿದರು.

ಯೇಸು, ದೇವರ ಮಗನೆಂದು ಸಾಬೀತುಪಡಿಸುವ ಸಲುವಾಗಿ ಸೂಚಕ ಕಾರ್ಯಗಳನ್ನು ಪ್ರದರ್ಶಿಸಲಾಯಿತು: "ಇದನ್ನು ನೀವು ನಂಬುವಂತೆ" ಅವನ ಪುಸ್ತಕವನ್ನು ಬರೆಯಲಾಗಿತು ಎಂದು ಯೋಹಾನನು ತಿಳಿಸಿರುವನು (ಯೋಹಾನ 20:30, 31). ನಜರೇತಿನ ಯೇಸು, "ದೇವರ ಮಗನೆಂಬ" ಅಪೊಸ್ತಲರ ಬೋಧನೆಯನ್ನು ಕೇಳಿರುವವನು, ಈ ಸೂಚಕಕಾರ್ಯದ ಅನುಭವವನ್ನು ಹೊಂದುವನು. ಸೂಚಕ ಕಾರ್ಯಗಳು, ಸುವಾರ್ತೆಯ ಬೋಧನೆಗೆ ಒತ್ತು ಕೊಡುತ್ತದೆ.

ಸುವಾರ್ತೆಯ ಕುರಿತಾದ ಈ ಹೊಸ ಪದವನ್ನು ಮೊದಲನೆಯದಾಗಿ ಕರ್ತನು ಬಳಸಿರುವನು, ನಂತರ ಅದನ್ನು ಅಪೊಸ್ತಲರು ರುಜುವಾತು ಪಡಿಸಿದರು. ಮತ್ತು ದೇವರು ಅವರ ಕೈಯಿಂದ ಸೂಚಕ ಕಾರ್ಯಗಳನ್ನು ಅದ್ಭುತಕಾರ್ಯಗಳನ್ನು ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪವಿತ್ರಾತ್ಮ ವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು (ಇಬ್ರಿಯ 2:3, 4).

**ಸಿದ್ಧಾಂತದೊಂದಿಗಿನ ಒಪ್ಪಂದವನ್ನು ಪ್ರಕಟಿಸಿರಿ**

ಅಪೊಸ್ತಲರು ಪರಸ್ಪರ ವ್ಯತ್ಯಾಸಗಳನ್ನು ಪ್ರದರ್ಶಿಸಲಿಲ್ಲ, ಯಾಕಂದರೆ ದೇವರಿಂದ ಪ್ರಕಟವಾದ ಸತ್ಯಗಳನ್ನು ಮಾತ್ರ ಅವರು ಬೋಧಿಸಿದರು. ಒಂದು ವೇಳೆ ಇಬ್ಬರು ಅಪೊಸ್ತಲರು, ಸೂಚಕ ಕಾರ್ಯಗಳನ್ನು ಮಾಡುವ ವರವನ್ನು ಹೊಂದಿದ್ದರೆ, ಅವರುಗಳು ದೇವರಿಂದ ಹೊಂದಿದ ಬೋಧನೆಗಳು ಸಹ ಅವುಗಳನ್ನು ಹಿಂಬಾಲಿಸುತ್ತಿದ್ದವು - ಅದು ಬಹಳ ಸ್ಪಷ್ಟವಾಗಿರುತ್ತಿತು. ಹೇಗೂ "ಎಲ್ಲಿ ಇಬ್ಬರು ಮೂವರು ಆತನ ಹೆಸರಿನಲ್ಲಿ ಸೇರಿ ಬರುತ್ತಾರೋ ಅವರ ನಡುವೆ ತಾನು ಇರುವನೆಂದು ಈಗಾಗಲೇ ವಾಗ್ದಾನ ಮಾಡಿದನು" (ಮತ್ತಾಯ 18:20). ಈ ಹಿನ್ನೆಲೆಯ ನಿಮಿತ್ತ ಪ್ರತಿಯೊಬ್ಬ ಅಪೊಸ್ತಲನು "ದೇವ ರಾಜ್ಯದ ಬೀಗದ ಕೈಗಳನ್ನು ಹೊಂದಿದ್ದರು" ಮತ್ತು ಪೇತ್ರನಿಗೆ ಮಾತ್ರ ಉಂಟಾಗಿದ್ದ ವಾಗ್ದಾನವಾಗಿತ್ತು (ಮತ್ತಾಯ 16:19). ಮತ್ತಾಯ 18:18ರಲ್ಲಿ ಪ್ರತಿ ಅಪೊಸ್ತಲನು "ಬಿಚ್ಚುವ ಹಾಗೂ ಕಟ್ಟುವ" ವಿಚಾರದಲ್ಲಿ ಅಪೊಸ್ತಲರು ದೇವರ ಚಿತ್ತವನ್ನು ಪ್ರಕಟಿಸುವ ಅಧಿಕಾರವನ್ನು ಹೊಂದಿದ್ದರು, ಅದು ಈಗಾಗಲೇ ಪರಲೋಕದ ಸಿಂಹಾಸನದ ಬಳಿಯಲ್ಲಿ ನಿರ್ಧಾರವಾಗಿತ್ತು.

ಸಿದ್ಧಾಂತ ವಿಚಾರದಲ್ಲಿ, ಅಪೊಸ್ತಲರು ತಮ್ಮದೇ ಆದ ನಿರ್ಣಯವನ್ನು ಕೈಗೊಳ್ಳಲಿಲ್ಲ; ಪರಲೋಕದಲ್ಲಿ ಈಗಾಗಲೇ ನಿರ್ಣಯವಾದದ್ದನ್ನು ಮಾತ್ರ ಪ್ರಕಟಿಸಿದರು. ಅವರ ಬೋಧನೆ ಗಳಲ್ಲಿ ಇಂತಹ ಸತ್ಯಗಳನ್ನು ಪ್ರಕಟಿಸಿದಾಗ, ಅವರುಗಳು ಪರಸ್ಪರ ಒಪ್ಪಿಕೊಂಡಿದ್ದರು. ದೇವರು ಅದ್ಭುತವಾಗಿ ಪ್ರಕಟಿಸಿದ ಶಕ್ತಿಯು ಅವರ ನಡುವೆ ಇರುತ್ತಿತ್ತು, ದೇವರು ಒಂದೇ ಸತ್ಯವನ್ನು ಎಲ್ಲರಿಗೂ ಪ್ರಕಟಿಸಿದನು.

ಬೋಧಿಸುವ ವಿಷಯದಲ್ಲಿ ಅವರಲ್ಲಿ ಯಾರಿಗಾದರು ಒಬ್ಬರಲ್ಲಿ ವ್ಯತ್ಯಾಸ ಕಂಡುಬಂದರೆ, ಅಂತವರು ದೇವರಿಂದ ಬಂದ ಪ್ರಕಟನೆಯನ್ನು ಬೋಧಿಸುತ್ತಿರಲಿಲ್ಲ. ಸತ್ಯವು

ಸ್ವಂತ ವ್ಯತ್ಯಾಸವನ್ನು ಹೊಂದಿರುವದಿಲ್ಲ. ದೇವರ ವಾಕ್ಯವು ಸತ್ಯವಾಗಿರುತ್ತದೆ (ಯೋಹಾನ 17:17), ಮತ್ತು ಸತ್ಯವು ಮಾತ್ರ ಶುದ್ಧಿಸುವ ಶಕ್ತಿಯನ್ನು ಹೊಂದಿರುತ್ತದೆ. ಆದುದರಿಂದ, ಅಪೊಸ್ತಲರಾಗಲಿ ಮತ್ತು ಹೊಸ ಒಡಂಬಡಿಕೆಯ ಇತರೆ ಪ್ರೇರಿತ ಬರಹಗಾರರಾಗಲಿ ವ್ಯತ್ಯಾಸ ಬೋಧನೆಯನ್ನು ಮಾಡಿದರೆಂದು ಒಬ್ಬನು ತಿಳಿಯುವದು ಅಸಾಧ್ಯವಾಗುತ್ತದೆ.

ಅದ್ಭುತ - ಮಾಡುತ್ತೇವೆಂದು ಹೇಳುವವರು ತಾವುಗಳು ವ್ಯತ್ಯಾಸವಾದ ಬೋಧನೆಗಳನ್ನು ಹೊಂದಿರುತ್ತಾರೆ. ಈ ಕಾರಣದಿಂದ ಅವರಲ್ಲಿ ಕೆಲವರು ಅಥವಾ ಎಲ್ಲರೂ ಸತ್ಯವನ್ನು ಬೋಧಿಸುತ್ತಿರುವದಿಲ್ಲ. ಈ ವಿಷಯದಲ್ಲಿ ಕೆಲವರು ತಪ್ಪಿತಸ್ಥರಾಗಿರುವದರಿಂದ ಅದ್ಭುತಮಾಡುವ ಸಾಮರ್ಥ್ಯವನ್ನು ಅವರು ದೇವರಿಂದ ಪಡೆದಿರುವದಿಲ್ಲ. ಸುಳ್ಳು ಪ್ರವಾದಿಗಳಿಗೆ ಅದ್ಭುತ ಮಾಡುವ ಶಕ್ತಿಯನ್ನು ದೇವರು ನೀಡುವದಿಲ್ಲ.

ದೇವರ "ಆತ್ಮನಿಂದ - ತುಂಬಿಸಲ್ಪಟ್ಟಿದ್ದೇವೆ" ಎಂದು ಹೇಳುವವರು ಸತ್ಯವೇದದ ಸರಳ ಬೋಧನೆಗಳಿಗೆ ವ್ಯತಿರಿಕ್ತವಾಗಿರುತ್ತಾರೆ. ಅವರ ಕೆಲವು ಸಿದ್ದಾಂತಗಳು ಕರ್ತನ ಬೋಧನೆಗಳಿಗೆ ವಿರುದ್ಧವಾಗಿರುತ್ತದೆ. ದೈವೀಕ ಬೋಧನೆಗಳಲ್ಲಿ ವ್ಯತ್ಯಾಸ ಮಾಡುವಂತ ಸುಳ್ಳುಬೋಧಕರಿಗೆ ದೇವರು ತನ್ನ ಶಕ್ತಿಯನ್ನು ನೀಡುವದಿಲ್ಲ. ಅದ್ಭುತ ಮಾಡುತ್ತೇನೆಂದು ಹೇಳುವವರ ಯತಾರ್ಥತೆಯನ್ನು ಪರಿಕ್ಷಿಸಬೇಕಿದ್ದರೆ ಅವರ ಬೋಧನೆಗಳು ಸತ್ಯವಾಕ್ಯಕ್ಕೆ ಅನುಗುಣವಾಗಿರದಿದ್ದರೆ, ಮತ್ತು ಸತ್ಯವೇದದಲ್ಲಿ ಇಲ್ಲದಿದ್ದರೆ, ಅವರ ದೇವರ ಶಕ್ತಿಯಿಂದ ಅದ್ಭುತಗಳನ್ನು ಮಾಡುತ್ತಿರುವದಿಲ್ಲ. ಇದು ಬಹಳ ಸರಳವಾದದ್ದೆ ಇವರುಗಳು ಅಲೌಕೀಕವಾದದ್ದನ್ನು, ಅಥವಾ ಸ್ವಾಭಾವಿಕವಾದಂತ ಪ್ರಸ್ತಾಪವನ್ನು ಸರಿಯಾಗಿ ವಿವರಿಸದಿದ್ದರೆ, ಅವರು ಮಾಡುವಂತ ಅದ್ಭುತಗಳು ಸೈತಾನನಿಂದ ಬಂದವುಗಳೇ (2 ಥೆಸಲೋನಿಕ 2:8-10). ಈ ವಿಧವಾದಂತ ಸೂಚಕಕಾರ್ಯ ಹಾಗೂ ಸುಳ್ಳು ಅದ್ಭುತಗಳಿಂದ ಜನರನ್ನು ಸೈತಾನನು ಮಾತ್ರ ಮೋಸಪಡಿಸುತ್ತಾನೆ. ತಪ್ಪು ಸಿದ್ದಾಂತಗಳನ್ನು ದೇವರು ದೃಢಪಡಿಸುವದಿಲ್ಲ. ಅದು ಸೈತಾನನ ಕೆಲಸವಾಗಿದೆ. "ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ" (ಯೋಹಾನ 8:44).

**ಅವರ ಉಪದೇಶಗಳಿಗೆ ಸಹಾಯಿಸುವದಕ್ಕಾಗಿ**

ಆದಿ ಸಭೆಯಲ್ಲಿ ಒಂಬತ್ತು ವರಗಳ ಕುರಿತು ನೋಡುತ್ತೇವೆ (1 ಕೊರಿಂಥ 12:8-10). ಈ ವರಗಳಲ್ಲಿ ಜ್ಞಾನ ವಾಕ್ಯ, ವಿದ್ಯಾ ವಾಕ್ಯ, ನಂಬಿಕೆ ರೋಗಗಳನ್ನು ವಾಸಿಮಾಡುವ, ಮಹತ್ತುಗಳನ್ನು ಮಾಡುವವರು, ಪ್ರವಾದನೆ, ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ, ವಿವಿಧ ವಾಣಿಗಳನ್ನಾಡುವ, ವಾಣಿಗಳ ಅರ್ಥವನ್ನು ಹೇಳುವ ವರಗಳು ಕೊಡಲ್ಪಟ್ಟಿರುತ್ತವೆ. *ಈ ಒಂಬತ್ತು ವರಗಳಲ್ಲಿ ಆರು ವರಗಳು ದೇವ ವಾಕ್ಯದ ಉಪದೇಶಕ್ಕೆ ಸಂಬಂಧಪಟ್ಟಿರುತ್ತವೆ.* ಇಂತಹ ಸಂಬಂಧವನ್ನು ಗಮನಿಸದೇ ಇರಬಾರದು. ನಂಬಿಕೆ, ಸ್ವಸ್ಥತೆ, ಮತ್ತು ಅದ್ಭುತಗಳನ್ನು ಪರೋಕ್ಷವಾಗಿ ಉಪಯೋಗಿಸಿದ್ದರೆ ಇತರೆ ವರಗಳನ್ನು ಮೆಸ್ಸಿಯನ ರಾಜ್ಯದ ಕುರಿತಾದದೇವ ವಾಕ್ಯದ ಬೋಧನೆಗಳಾಗಿರುತ್ತವೆ.

(1) "ಜ್ಞಾನ ವಾಕ್ಯ" ತಿಳಿದಿರುವ ಸತ್ಯವನ್ನು ಜೀವಿತದ ವಿವಿಧ ಸನ್ನಿವೇಶದಲ್ಲಿ ಅಳವಡಿಸಿಕೊಳ್ಳುವ ಸಾಮರ್ಥ್ಯವಾಗಿರುತ್ತದೆ.

(2) "ವಿದ್ಯಾವಾಕ್ಯ" ಸತ್ಯಗಳ ಸಿದ್ದಾಂತಗಳನ್ನು ವಿವೇಚಿಸುವ ಸಾಮರ್ಥ್ಯ.

(3) "ನಂಬಿಕೆ" ಈ ವರವು ದೇವರಾತ್ಮನಿಂದ ಅನುಗ್ರಹವಾಗಿದ್ದು ಅಲೌಕಿಕ ಕಾರ್ಯಗಳನ್ನು ಮಾಡುವ ಸಾಮರ್ಥ್ಯವಾಗಿರುತ್ತದೆ. ಇಂತಹ ವಿಧವಾದ ನಂಬಿಕೆಯನ್ನು ದೆವ್ವ ಹಿಡಿದ ಹುಡುಗನನ್ನು ಸ್ವಸ್ಥಮಾಡುವಗಲೂ (ಮತ್ತಾಯ 17:14-21) ಮತ್ತು ಅಂಜೂರದ ಗಿಡವನ್ನು ಶಪಿಸಿದಾಗಲೂ (ಮತ್ತಾಯ 21:18-21) ಬಳಸಲಾಗಿದೆ. ಈ "ನಂಬಿಕೆಯ" ವರವು ಅದ್ಭುತ ಮಾಡುವ ವರವಾಗಿದೆಯೇ ಹೊರತು ದೇವರ ವಾಕ್ಯಕ್ಕೆ ಕಿವಿಕೊಟ್ಟು ಸ್ವೀಕರಿಸುವ

ನಂಬಿಕೆಯಾಗಿರುವದಿಲ್ಲ (ರೋಮಾಪುರ 10:17).

(4) "ಸ್ವಸ್ಥ ಮಾಡುವ ವರ" ಅನಾರೋಗ್ಯದ ದೇಹವನ್ನು ಪುನರಚನೆ ಮಾಡುವದು.

(5) "ಮಹತ್ತುಗಳ ವರ" ಸತ್ತವರನ್ನು ಎಬ್ಬಿಸುವದು (ಅಪೊಸ್ತಲರ ಕೃತ್ಯಗಳು 9:36-42). ಅಥವಾ ಸತ್ಯ ಬೋಧನೆಗೆ ಅಡ್ಡಿಯಾಗಿರುವವರನ್ನು ಮಂಕುಮಾಡುವ ವರ (ಅಪೊಸ್ತಲರ ಕೃತ್ಯಗಳು 13:8-11).

(6) "ಪ್ರವಾದನಾ ವರ" ದೇವರಿಂದ ಸತ್ಯವನ್ನು ಸ್ವೀಕರಿಸಿ ಆತನಿಗಾಗಿ ಮಾತನಾಡುವದು, ಅಥವಾ ಆತನ ಪರವಾಗಿ ಮಾತನಾಡುವದು ಗ್ರೀಕ್ ಭಾಷೆಯ ಮೂಲದಲ್ಲಿ "ಪ್ರವಾದಿ" ಅಂದರೆ "ಆತನಿಗಾಗಿ" ಮತ್ತು "ಆತನ ಪರವಾಗಿ" ಎಂದಿರುವದರಿಂದ "ದೇವರಿ ಗೋಸ್ಕರ ಮಾತನಾಡುವದು" ಎಂಬ ಅರ್ಥವಾಗಿದೆ.

(7) "ಸತ್ಯಾಸತ್ಯಾತ್ಮಗಳನ್ನು ವಿವೇಚಿಸುವ ವರ" ಒಬ್ಬನು ಪ್ರೇರಿತನಾಗಿ ಮಾತನಾಡುತ್ತಿದ್ದೇನೆಂಬುದನ್ನು ವಿವೇಚಿಸುವಂತ ವರ ಅವನು ದೇವರಾತ್ಮನಿಂದ ಮಾತನಾಡುತ್ತಿರುವನೋ ಅಥವಾ ಸೈತಾನನಿಂದ ದೊರಕಿದ ಆತ್ಮನಿಂದ ಮಾತನಾಡುತ್ತಿರುವನೋ ಎಂಬ ಪರಿಗ್ರಹಿಸುವ - ವರ ಆದಿ ಸಭೆಯಲ್ಲಿ ಅಪೊಸ್ತಲರು ಇಲ್ಲದೇ ಇರುವಾಗ ನಿರ್ದಿಷ್ಟವಾದ ಈ ವರವು ಬಹಳ ಅನುಕೂಲವಾಗಿತ್ತು. ಆದಿ ಸಭೆಯು ಪರಿಪೂರ್ಣವಾದ ಹೊಸ ಒಡಂಬಡಿಕೆಯನ್ನು ಹೊಂದದೇ ಇದ್ದದ್ದರಿಂದ ಬೋಧಕರುಗಳನ್ನು ಪರೀಕ್ಷಿಸುವದು ಅಸಾಧ್ಯವಾದದ್ದರಿಂದ, ಸಭೆಯ ಸದಸ್ಯನು ಈ ವಿವೇಚನಾ ವರವನ್ನು ಉಪಯೋಗಿಸಲೇ ಬೇಕಿತ್ತು.

(8) "ವಿವಿಧ ವಾಣಿಗಳ ವರ" ಪ್ರಚಲಿತವಾಗಿರುವ ಪರಭಾಷೆಗಳನ್ನಾಡುವ ವರ ಅದನ್ನು ಮಾತನಾಡುವವನು ಇದರ ಕುರಿತು ವೇದಭ್ಯಾಸ ಮಾಡಿರಲಿಲ್ಲ. ಆದಿ ಸಭೆಯ ಸಮಯದಲ್ಲಿ ಅಪೊಸ್ತಲರು ಇದನ್ನೇ ಮಾಡಿದ್ದರು (ಅಪೊಸ್ತಲರ ಕೃತ್ಯಗಳು 2:4). ಈ ಭಾಷೆಗಳನ್ನು ಪಾಲಿಸ್ತೇನ ದೇಶವನ್ನು ಹೊರತುಪಡಿಸಿ ಇತರೇ ದೇಶಗಳಲ್ಲಿ ಮಾತನಾಡುತ್ತಿದ್ದರು, ಅಪೊಸ್ತಲರ ಮಾತುಗಳನ್ನು ಕೇಳಿದವರು "ಇವರು ನಮ್ಮ ನಮ್ಮ ಭಾಷೆಗಳಲ್ಲಿ ಮಾತನಾಡುತ್ತಿರುವರು ಅಂದುಕೊಂಡರು" (ಅಪೊಸ್ತಲರ ಕೃತ್ಯಗಳು 2:8).

(9) "ವಾಣಿಗಳ ಅರ್ಥವನ್ನು ಹೇಳುವ ವರ" ದೊಡ್ಡ ಸಮೂಹದಲ್ಲಿ ಜನರು ಅರ್ಥಮಾಡಿಕೊಳ್ಳುವಂತೆ ಭಾಷೆಗಳನ್ನು ತರ್ಜುಮೆ ಮಾಡಿ ವಿವರಿಸುವಂತ ವರ ಪ್ರಾಯಶಃ ಎಫೆಸ ಸಭೆಯವರು ಗ್ರೀಕ್ ಭಾಷೆಯನ್ನು ಮಾತ್ರ ಮಾತನಾಡುತ್ತಿರಬಹುದು. ಇತರರು ಇಬ್ರಿಯ ಭಾಷೆಯನ್ನು ಮಾತ್ರ ಮಾತನಾಡುತ್ತಿರಬಹುದು. ಇತರರು ಇಬ್ರಿಯ ಭಾಷೆಯಲ್ಲಿ ಮಾತನಾಡುತ್ತಿದ್ದರೆ, ಅನುವಾದಕರು ಕೇಳುಗರ ಲಾಭಕ್ಕಾಗಿ ಇಬ್ರಿಯ ಭಾಷೆಯಲ್ಲಿ ತರ್ಜುಮೆ ಮಾಡುತ್ತಿದ್ದರು.

ಹೊಸ ಒಡಂಬಡಿಕೆ ಕಾಲದ ಈ ಅದ್ಭುತಗಳು ಅಥವಾ ಇತರೇ ವರಗಳು ಪಾಪಗಳನ್ನು ಕ್ಷಮಿಸುವ ಕಾರ್ಯವನ್ನು ಮಾಡಲಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ವರಗಳನ್ನು ಹೊಂದುವದರಿಂದ ಅವನು ಕರ್ತನ ರಾಜ್ಯಕ್ಕೆ ಹೊಸದಾಗಿ ಹುಟ್ಟಿದನು ಎಂಬ ತತ್ವವು ಇದರಲ್ಲಿರುವದಿಲ್ಲ. ದೇವರ ವಾಕ್ಯದ ಉಪದೇಶಕ್ಕೂ ಮತ್ತು ಆ ವಾಕ್ಯವು ಸತ್ಯವಾಗಿಯೂ ದೇವರಿಂದ ಬಂದದ್ದೆಂದು ದೃಢಪಡಿಸುವದಕ್ಕೂ ಸೂಚಕಕಾರ್ಯಗಳನ್ನು ಮತ್ತು ಅದ್ಭುತ ಕಾರ್ಯಗಳನ್ನು ಬಳಸಲಾಗಿದೆ.

## ಅಪೊಸ್ತಲರ ಕೃತ್ಯದಲ್ಲಿ ಅದ್ಭುತಗಳ ಉದ್ದೇಶದ ನಿದರ್ಶನಗಳನ್ನು ತಿಳಿಸಲಾಗಿದೆ

ಅಪೊಸ್ತಲರ ಜೀವಿತದಲ್ಲಿ ದೇವರ ವಾಕ್ಯವು ಹೇಗೆ ಕಾರ್ಯ ಮಾಡಿತೆಂಬುದನ್ನು ಅಪೊಸ್ತಲರ ಕೃತ್ಯದಲ್ಲಿ ದೇವರು ದೃಢಪಡಿಸಿ ದಾಖಲಿಸಿದ್ದಾನೆ. ಅಪೊಸ್ತಲರು ಪರಿಶುದ್ಧಾತ್ಮನ ಬಲವನ್ನು ಹೊಂದಿದವರಾಗಿ, ಕಾರ್ಯಪ್ರವೃತ್ತರಾದರು ಅವರುಗಳು ನೂತನವಾಗಿ ಹೊಂದಿದ ಪ್ರಕಟನೆಗಳನ್ನು ಪ್ರಸಂಗಿಸಿ, ಸೂಚಕಕಾರ್ಯಗಳನ್ನು ಅದ್ಭುತಕಾರ್ಯಗಳನ್ನು

ಮತ್ತು ಮಹತ್ಕಾರ್ಯಗಳನ್ನು ಮಾಡಿ ಅವರು ಕರ್ತನಾದ ಯೇಸು ಕ್ರಿಸ್ತನ ಪರವಾಗಿ ಮಾತನಾಡುತ್ತಿದ್ದರೆಂದು ಸಾಬೀತುಪಡಿಸಿದರು.

ಪಂಚಾಶತ್ತಮದಿನದಂದು ಅಪೊಸ್ತಲರು ಬಹಿರಂಗವಾಗಿ ಅದ್ಭುತಗಳನ್ನು ಮಾಡಿ ಆ ಪ್ರಥಮ ದಿನದಲ್ಲಿ ಸಂಪೂರ್ಣ ಸುವಾರ್ತೆಯನ್ನು ಸಾರಿ ಮತ್ತು ನಂಬಿದವರಿಗೆ ಮಾನಸಾಂತರಕ್ಕೂ ಮತ್ತು ದೀಕ್ಷಾಸ್ನಾನಕ್ಕೂ ಕರೆಯನ್ನು ನೀಡಿದನು (ಅಪೊಸ್ತಲರ ಕೃತ್ಯಗಳು 2:4-11, 36, 41). ಈ ಕಾಲದಲ್ಲಿ, ಅಪೊಸ್ತಲರು ಮಾತ್ರ ಅದ್ಭುತಗಳನ್ನು ಮಾಡುತ್ತಿದ್ದರು, ಆದರೆ ಅವರುಗಳು ಇತರರು ಸ್ವಸ್ಥತೆಯನ್ನು ಪಡೆಯುವಂತೆ ತಮ್ಮ ಹಸ್ತಗಳನ್ನು ಅವರ ಮೇಲಿಟ್ಟು ಪ್ರಾರ್ಥಿಸಿರಲಿಲ್ಲವೆಂದು ಲೂಕನು ತಿಳಿಸಿರುವನು. ಪೇತ್ರನು ಹುಟ್ಟುಕುಂಟನನ್ನು ಗುಣಪಡಿಸಿದ ನಂತರ ಸಲೊಮೋನನ ಮಂಟಪದಲ್ಲಿ ಪ್ರಸಂಗವನ್ನು ಮಾಡಲು ಅವಕಾಶವನ್ನು ಪಡಕೊಂಡನು (ಅಪೊಸ್ತಲರ ಕೃತ್ಯಗಳು 3:7-10; 4:14).

ಕೆಲವು ದಿವಸಗಳ ನಂತರ, ಅನೇಕ ಜನರನ್ನು ಗುಣಪಡಿಸಿದ ಮೇಲೆ ಅವರು ಮಾಡಿದ ಉಪದೇಶವನ್ನು ಹಾಗೂ ಅಪೊಸ್ತಲರು ದೇವರ ಶಕ್ತಿಯನ್ನು ಹೊಂದಿದವರೆಂಬ ಮಾನ್ಯತೆಯನ್ನು ಪಡೆದರು (ಅಪೊಸ್ತರ ಕೃತ್ಯಗಳು 5:12-16). ಈ ಅದ್ಭುತಗಳ ಮೂಲಕ ಅನೇಕ ಜನರು ಸಭೆಗೆ ಸೇರಿಕೊಂಡರು (ವಚನ 14). ಸ್ತೆಫನನು ಮಾಡಿದ ಮಹತ್ಕಾರ್ಯಗಳ ನಿಮಿತ್ತ ಅವನ ಉಪದೇಶವನ್ನು ಶಕ್ತಿಯುತವಾದದ್ದೆಂದು ದೃಢಪಡಿಸಲಾಯಿತು (ಅಪೊಸ್ತಲರ ಕೃತ್ಯಗಳು 6:8), ಯಾಕಂದರೆ ಅಪೊಸ್ತಲರು ಅವನ ತಲೆಯ ಮೇಲೆ ಕೈಗಳನ್ನಿಟ್ಟಿದ್ದರಿಂದ ಅವನು ಅದ್ಭುತ ಮಾಡುವ ವರವನ್ನು ಹೊಂದಿಕೊಂಡಿದ್ದನು (ವಚನ 6). ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಸೂಚಕಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕಮನಸ್ಸಾಗಿ ಲಕ್ಷಕೊಟ್ಟರು (ಅಪೊಸ್ತಲರ ಕೃತ್ಯಗಳು 8:6).

ಪೇತ್ರನು ದೋರ್ಕಳನ್ನು ಮರಣದಿಂದ ಎಬ್ಬಿಸಿದಾಗ "ಅನೇಕರು ಕರ್ತನ ಮೇಲೆ ನಂಬಿಕೆಯಿಟ್ಟರು" (ಅಪೊಸ್ತಲ ಕೃತ್ಯಗಳು 9:42). ನಂತರ ಪೇತ್ರನು ಕೊರ್ನೇಲ್ಯನ ಮನೆಗೆ ಆಹ್ವಾನಿಸಲ್ಪಟ್ಟದ್ದು ಅವನು ಅನ್ಯನ ಮನೆಗೆ ಹೋಗಬೇಕೆಂದು ಎರಡು ಮಹತ್ಕಾರ್ಯಗಳು ಅವನಲ್ಲಿ ರುಜುವಾತುಪಡಿಸಿದ್ದವು. ಮೊದಲನೆಯ ಅದ್ಭುತದಲ್ಲಿ ಪರಲೋಕದಿಂದ ಬಂದ ವಸ್ತುವನ್ನು ಪೇತ್ರನು ದರ್ಶನದಲ್ಲಿ ನೋಡಿದನು ಅದರೊಳಗೆ ಸಕಲ ವಿಧವಾದ ಪಶುಗಳಿದ್ದವು. ಪೇತ್ರನು ಅದನ್ನು ಕೊಂದು ತಿನ್ನಬೇಕೆಂಬ ಆದೇಶವನ್ನು ಪಡೆದನು (ಅಪೊಸ್ತಲರ ಕೃತ್ಯಗಳು 10:9-16). ನಂತರ ಪರಿಶುದ್ಧಾತ್ಮನು ಅವನಿಗೆ ಅನ್ಯಾನಾದವನ ಸೇವಕರೊಂದಿಗೆ ಹೋಗ ಬೇಕೆಂಬ ಸ್ವರವನ್ನು ಕೇಳಿದ್ದು ಎರಡನೇಯ ಅದ್ಭುತವಾಗಿತ್ತು (ಅಪೊಸ್ತಲರ ಕೃತ್ಯಗಳು 10:17-20). ಈ ಎರಡು ಅದ್ಭುತಗಳು ಅಸಹಜವಾಗಿದ್ದವು, ಇದರಲ್ಲಿ ದೇವರು ಅಪೊಸ್ತಲರಿಗೆ ತನ್ನ ಚಿತ್ತವನ್ನು ಸ್ಪಷ್ಟಪಡಿಸಿದ್ದನು. ಯೇಸುವಿನ ಕುರಿತು ಬೋಧನೆಯನ್ನು ಕೇಳಿದವರಿಗಾಗಿ ಈ ವಿಧ ವಾದ ಅದ್ಭುತಗಳನ್ನು ಪ್ರಕಟಿಸಲಾಗುತ್ತಿತ್ತು.

ಈ ಸಂದರ್ಭದಲ್ಲಿ ಇನ್ನೊಂದು ವಿಶೇಷವಾದ ಅದ್ಭುತವು ಜರುಗಿತು; ಅದು ಒಂದೇ ಸಾರಿ ನಡೆದ ಅದ್ಭುತವಾಗಿತ್ತು. ದೇವರು ತನ್ನ ಅಭಿಲಾಷೆಯನ್ನು ಪೇತ್ರನಿಗೆ ಪ್ರಕಟಿಸಿ, ಆರುಜನ ಸೇವಕರು ಹಾಗೂ ಪೇತ್ರನೊಂದಿಗೆ ಪವಿತ್ರಾತ್ಮನು ಸಾಗಿ, ಅವರನ್ನು ಕೊರ್ನೇಲ್ಯ ಯನ ಮನೆಗೆ ನಡೆಸಿದನು. ಅವರು ಪವಿತ್ರಾತ್ಮ ಭರಿತರಾಗಿ, ನಾನಾ ಭಾಷೆಗಳನ್ನಾಡಿ ದೇವರನ್ನು ಕೊಂಡಾಡುತ್ತಾ ಇದ್ದರು (ಅಪೊಸ್ತಲರ ಕೃತ್ಯಗಳು 10:44-46). ಅವರು ಕ್ರೈಸ್ತರಾಗುವದಕ್ಕಿಂತ ಮೊದಲು ಈ ಅನುಭವವನ್ನು ಹೊಂದಿದ್ದರು! ದೇವರನ್ನು ಇನ್ನೂ ಅರಿಯದವರು, ಕ್ರೈಸ್ತರಲ್ಲದವರನ್ನು ಯೇಸು ಕ್ರಿಸ್ತನನ್ನು ದೇವರ ಮಗನೆಂದು ಅರಿಯದವರನ್ನು - ದೇವರು ಉಪಯೋಗಿಸಿದನು; ಜಾತಿಗನುಗುಣವಾಗಿ, ಸಾಂಪ್ರದಾಯದ ಯೆಹೂದ್ಯರು, ಹಾಗೂ ಪೇತ್ರನು, ಸಹ ಅನ್ಯರಿಗೆ ವಾಕ್ಯವನ್ನು ಸಾರಿ ಅವರನ್ನು ಕ್ರಿಸ್ತನಿಗೆ ದೀಕ್ಷಾಸ್ನಾನ ಮಾಡಿಸಬೇಕೆಂದು, ಹಾಗೂ ಅವರನ್ನು ಸಹೋದರರ ಅನ್ಯೋನ್ಯತೆಗೆ ಸೇರಿಸಿ, ಅವರು

ಸಹ ಕ್ರಿಸ್ತನವರಾಗಬೇಕು ಎಂದು ಮನವರಿಕೆ ಮಾಡಿಕೊಂಡರು. ಈ ಸಮಯದಲ್ಲಿ ದೇವರು ಅಪೊಸ್ತಲರನ್ನೂ ಹಾಗೂ ಅನ್ಯರನ್ನು ಉಪಯೋಗಿಸುವಂಥ ಅದ್ಭುತವನ್ನು ಬಳಸಿದನು.

ಪೌಲನ ಮೊದಲನೆಯ ಸೇವಾ ಪ್ರಯಾಣದ ಅವಧಿಯಲ್ಲಿ, ಸುವಾರ್ತೆಗೆ ಅಡ್ಡಿಯಾಗಿದ್ದ ಎಲೂಮನೆಂಬ ಮನುಷ್ಯನನ್ನು ಕುರುಡಾಗುವಂತೆ ಮಾಡಿದನು. ಅತಿಪತಿಯು ಆ ಸಂಗತಿಯನ್ನು ನೋಡಿ ಕರ್ತನ ಬೋಧನೆಗೆ ಅತ್ಯಾಶ್ಚರ್ಯಪಟ್ಟು ನಂಬುವವನಾದನು ಅಪೊಸ್ತಲರ ಕೃತ್ಯಗಳು 13:12. "ಇಲ್ಲಿಯು ಸಹ ಅದ್ಭುತದ ಹಿನ್ನೆಲೆಯಲ್ಲಿ ದೇವರ ವಾಕ್ಯ ಇರುವದನ್ನು ದೃಢಪಡಿಸಲಾಗಿದೆ."

ಕಣಿ ಹೇಳುತ್ತಿದ್ದು, ಸೈತಾನನಿಂದ ಪ್ರೇರಿತಳಾಗಿದ್ದ ಒಬ್ಬ ದಾಸಿಯಿಂದ, ಪೌಲನು ದೆವ್ವವನ್ನು ಬಿಡಿಸಿದಾಗ, ಫಿಲಿಪ್ಪಿ ಪಟ್ಟಣದಲ್ಲಿ ದೊಡ್ಡ ಗದ್ದಲ ಉಂಟಾಯಿತು. ಈಗ ಆಕೆಯಿಂದ ಲಾಭವು ಇಲ್ಲದಾಯಿತು ಎಂದು ತಿಳಿದು ಆಕೆಯ ಯಜಮಾನರು ಪೌಲ ಸೀಲರನ್ನು ಸೆರೆಮನೆಗೆ ಹಾಕಿಸಿದರು. ಅವರೊಬ್ಬರೂ ಸೆರೆಮನೆಗೆ ಹಾಕಲ್ಪಟ್ಟ ಕಾರಣ, ಸೆರೆಯ ಯಜಮಾನನಿಗೂ ಹಾಗೂ ಅವನ ಮನೆಯವರಿಗೂ ಬೋಧಿಸುವ ಅವಕಾಶವುಂಟಾಯಿತು (ಅಪೊಸ್ತಲರ ಕೃತ್ಯಗಳು 16:16-34). ಅಲ್ಲಿ ಅದ್ಭುತವಾದ ಭೂಕಂಪ ಉಂಟಾಗಿ, ಸೆರೆಮನೆಯ ಕದಗಳು ತೆರೆದು ಕೊಳ್ಳಲಾಗಿ; ಈ ವಿಚಿತ್ರ ಘಟನೆಗಳ ಮೂಲಕ, ಸಕಲರೂ ಪೌಲ ಸೀಲರ ಮಾತುಗಳನ್ನು ಆಲಿಸಬೇಕೆಂದು ಸೆರೆ ಯಜಮಾನನು ಮನವರಿಕೆ ಮಾಡಿಕೊಂಡನು.

ಪೌಲನ ಮೂರನೆಯ ಸೇವಾ ಪ್ರಯಾಣದಲ್ಲಿ, ಅದ್ಭುತಗಳನ್ನು ಅವನು ಮಾಡಿದ್ದರಿಂದ ಎಫೆಸದವರಿಗೆ ವಾಕ್ಯ ಹೇಳುವ ಅವಕಾಶವುಂಟಾಯಿತು. ಸೈತಾನನಿಂದ ಪ್ರೇರಿತವಾದ ಅನೇಕ ಘಟನೆಗಳು ಜರುಗಿದರೂ, ಅದಕ್ಕೆ ತದ್ವಿರುದ್ಧವಾದ ಕಾರ್ಯಗಳೂ ಜರುಗಿದವು (ಅಪೊಸ್ತಲರ ಕೃತ್ಯಗಳು 19:11-20). ಪೌಲನ ಕೈಯಿಂದ ನಡೆದ ಅದ್ಭುತಗಳು, ದೇವರ ವಾಕ್ಯಕ್ಕೆ ಜಯವನ್ನು ಹಾಗೂ ವೃದ್ಧಿಯನ್ನು ಉಂಟುಮಾಡಿದವು (ವಚನ 20). ದೇವ ವಾಕ್ಯದ *ಪರಿಣಾಮವು* ಜನರಲ್ಲಿ ಅಧಿಕವಾಯಿತು. ಎಫೆಸದವರು ಪೌಲನ ಮಾತನ್ನು ಕೇಳಿ, ಆ ಸತ್ಯಕ್ಕೆ ಒಳಗಾದರು. ಈ ಅದ್ಭುತಗಳ ಮೂಲಕ ಅವರಿಗೆ ದೇವರ ವಾಕ್ಯವನ್ನು ದೃಢಪಡಿಸಲಾಯಿತು. ಸತ್ಯದ ಪ್ರಕಟನೆಯೊಂದಿಗೆ ಅದ್ಭುತಗಳು ಹೆಣೆದುಕೊಂಡಿರುವದನ್ನು ನಾವುಗಳು ಗಮನಿಸುತ್ತೇವೆ.

ಈ ಅದ್ಭುತಗಳ ಕುರಿತು ಯಾರೂ ಸಹ ಯಾವ ಪ್ರಶ್ನೆಯನ್ನು ಕೇಳಲಿಲ್ಲ. ಯಾಕೆಂದರೆ ಅವುಗಳು ಸಹಜವಾದವಾಗಿದ್ದವು. ಈ ಕಾರಣದಿಂದ ಅಪೊಸ್ತಲರು ದೇವರಿಂದ ಪ್ರೇರಿತರಾದವರೆಂಬ ಹಾಗೂ ದೇವರಿಂದ ಹೊಂದಿದ ವಾಕ್ಯವನ್ನೇ ಅವರು ಸಾರಿದರೆಂಬ ಮನವರಿಕೆ ಉಂಟಾಯಿತು. ಅದ್ಭುತಗಳು ದೇವರ ವಾಕ್ಯವನ್ನು ರುಜುವಾತು ಪಡಿಸಿದ್ದರಿಂದ, ಅದನ್ನು ಬೋಧಿಸಿದರು ಆದ್ದರಿಂದ ಅವರು ಯಥಾರ್ಥರೇ ಎಂದು ದೃಢವಾಯಿತು. ಒಂದು ಸಾರಿಯಾದರೂ ಅದ್ಭುತಗಳ ಮೂಲಕ ಪಾಪಕ್ಷಮೆ ಉಂಟಾಗಲಿಲ್ಲ. ಒಂದು ಸಾರಿಯಾದರೂ ಅದ್ಭುತಗಳು ಒಬ್ಬನನ್ನು ಹೊಸದಾಗಿ ಹುಟ್ಟುವಂತೆ ಮಾಡಲಿಲ್ಲ. ಅದ್ಭುತಗಳ ಮೂಲಕ ಒಬ್ಬನಾದರೂ ಕ್ರೈಸ್ತನಾಗಲಿಲ್ಲ.

ಪ್ರತಿ ಅಪೊಸ್ತಲನಲ್ಲೂ, ಈ ಹಿಂದೆ ತಿಳಿಸಲ್ಪಟ್ಟ ದೇವರ ಆತ್ಮನ ಒಂಬತ್ತು ವರಗಳಿದ್ದವು. ಅದರಲ್ಲಿ ಪ್ರತಿಯೊಂದನ್ನು ಅವರು ಮಾಡಿದರು.[2] ನಂತರದಲ್ಲಿ ಇತರರೂ ಸಹ ಅದನ್ನು ಹೊಂದಿ ಕೊಳ್ಳುವಂತೆ, ಅವರ ಮೇಲೆ ಕೈಯಿಟ್ಟು ಪ್ರಾರ್ಥಿಸಿದ್ದರು (ಅಪೊಸ್ತಲರ ಕೃತ್ಯಗಳು 8:14-17). ಇದನ್ನು ಇತರರಿಗೆ ನೀಡುವ ಸಾಮರ್ಥ್ಯವನ್ನು ಅಪೊಸ್ತಲರ ಹೊರತುಪಡಿಸಿ, ಇನ್ನಾರು ಸಹ ಹೊಂದಿರಲಿಲ್ಲ ಉದಾಹರಣೆಗೆ ಯೆರೂಸಲೇಮಿನ ಫಿಲಿಪ್ಪಿನು ಸಮಾರ್ಯದಲ್ಲಿದ್ದರೂ, ಅಪೊಸ್ತಲರು ಸಮಾರ್ಯದವರಿಗೆ ಈ ವರದಾನಗಳನ್ನು ನೀಡಬೇಕೆಂದು ಪೇತ್ರ ಯೋಹಾನರನ್ನು ಕಳುಹಿಸಿದ್ದರು. ಫಿಲಿಪ್ಪನು ತಾನೇ ಅದ್ಭುತಗಳನ್ನು ಮಾಡುವವನಾಗಿದ್ದರೂ, ಅವನು ತಾನೇ ಅಪೊಸ್ತಲನಾಗಿರದೇ ಇದ್ದದರಿಂದ, ಈ ವರವನ್ನು

ಇತರರಿಗೆ ನೀಡಲಾಗಲಿಲ್ಲ.

ಹೊಸದಾಗಿ ಪರಿವರ್ತನೆಗೊಂಡಿದ್ದ ಸೀಮೋನನೆಂಬವನು, ಅಪೊಸ್ತಲರಲ್ಲಿದ್ದಂಥ ಈ ವರವನ್ನು ಗುರುತಿಸಿಕೊಂಡು, ಹಣದಿಂದ ಅದನ್ನು ಪಡೆಯಬಹುದೆಂದು ತಿಳುಕೊಂಡಿದ್ದನು. ಅದಕ್ಕೆ ಪೇತ್ರನು, ಇಂತಹ ಅದ್ಭುತವಾದ ದೇವರ ಕೆಲಸದಲ್ಲಿ ಅವನಿಗೆ ಯಾವುದೇ ವಿಧವಾದ ಪಾತ್ರವಿಲ್ಲವೆಂದು ಹೇಳಿದನು (ಯಾಕೆಂದರೆ ಅವನು ಅಪೊಸ್ತಲನಾಗಿರಲಿಲ್ಲ) ಆದರೆ ಅದಕ್ಕಾಗಿ ಮಾನಸಾಂತರ ಪಟ್ಟು, ದುರಾಶೆಯನ್ನು ಬಿಡಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 8:18-24).

ಆ ಒಂಬತ್ತು ವರಗಳಲ್ಲಿ ದೇವರ ಪರಿಪೂರ್ಣತೆಯ ಪ್ರಕಟನೆಯನ್ನು ಆ ಸಭೆಯ ಸಂರಕ್ಷಣೆಗೆ ನೀಡಲಾಗಿತ್ತು. ಅಪೊಸ್ತಲರು ಇಲ್ಲದೆ ಇದ್ದ ಸಂದರ್ಭದಲ್ಲಿ, ಕೊರಿಂಥದವರು ಈ ಅನುಭವವನ್ನು ಅನುಭವಿಸಿದ್ದರು, ಆ ಸಮಯದಲ್ಲಿ ಪೌಲನು ಪ್ರಯಾಣದಲ್ಲಿರುತ್ತಿದ್ದನು. ಸಭೆಯಲ್ಲಿ ಉಪದೇಶಗಳನ್ನು ಮುಂದುವರಿಸಲು ಹಾಗೂ ಸುಳ್ಳು ಪ್ರವಾದಿಗಳಿಂದ ಸಂರಕ್ಷಣೆ ಪಡೆಯುವ ಸಲುವಾಗಿ, ಇಂತಹ ವರಗಳನ್ನು ಹೊಂದಿದವರನ್ನು ಸಭೆಗಳಲ್ಲಿ ಇರಿಸಲಾಗುತ್ತಿತ್ತು, ಯಾಕೆಂದರೆ ಆ ದಿವಸಗಳಲ್ಲಿ, ಅವರಲ್ಲಿ ಪೂರ್ಣವಾದ ಹೊಸ ಒಡಂಬಡಿಕೆಯ ಪ್ರತಿಯು ಇರಲಿಲ್ಲ.

ಈ ದಿನಗಳಲ್ಲಿ ಮುದ್ರಿತವಾದ ವಾಕ್ಯಗಳಿಂದ ಸಭೆಗಳನ್ನು ಪ್ರೋತ್ಸಾಯಿಸಿ, ಸಂರಕ್ಷಿಸಬಹುದು. ಅದು ಪೂರ್ಣವಾಗಿದ್ದು, ಮತ್ತು ಅಗತ್ಯಕ್ಕನುಗುಣವಾಗಿದೆ. "ಅದು ದೇವ ಜನರಿಗೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆಯಾಗಿರುತ್ತದೆ" (ಯೂದ 3). ಪೌಲನ ದಿವಸಗಳಲ್ಲಿ, ಮುದ್ರಿತವಾದ ವಾಕ್ಯಗಳು ಲಭ್ಯವಿಲ್ಲದೆ ಇದ್ದದ್ದರಿಂದ, ಈ ಆದಿ ಸಭೆಯ ಸಂರಕ್ಷಣೆಗಾಗಿ, ಆತ್ಮನಿಂದ ದೊರೆಯುವ ವರಗಳನ್ನು ಬಳಸಲಾಗುತ್ತಿತ್ತು. ಸಹಜವಾಗಿ, ಅಪೊಸ್ತಲರು, ಒಂಬತ್ತು ವರಗಳನ್ನು ಸಭೆಗಳಲ್ಲಿ ಪ್ರಯೋಗಿಸುವಂತೆ, ಕೆಲವು ಜನರನ್ನು ನೇಮಿಸಿದ್ದನು. ಆ ಸದಸ್ಯರುಗಳಲ್ಲಿ ಈ ವರದಾನಗಳನ್ನು ವಿತರಣೆ ಮಾಡಲಾಗಿತ್ತು (1 ಕೊರಿಂಥ 12:7, 11). ಅಪೊಸ್ತಲರನ್ನು ಹೊರತುಪಡಿಸಿ, ಇತರರ್ಯಾರೂ ಈ ಒಂಬತ್ತು ವರಗಳನ್ನು ಪೂರ್ಣವಾಗಿ ಹೊಂದಿರಲಿಲ್ಲ (1 ಕೊರಿಂಥ 12:29, 30). ಆದರೆ ಪ್ರತಿ ಸಭೆಗಳಲ್ಲೂ ಈ ಒಂಬತ್ತು ವರದಾನಗಳು ಇದ್ದವು.

## ಅದ್ಭುತದ ಉದ್ದೇಶಗಳನ್ನು ಸಾಧಿಸಲಾಯಿತು

ಒಂದು ಸಾರಿ ದೇವರ ಪ್ರಕಟನೆಯು ದೃಢಪಟ್ಟ ನಂತರ, ಅದನ್ನು ಪುನಃ ದೃಢಪಡಿಸಿಕೊಳ್ಳುವ ಅಗತ್ಯವಿರುವದಿಲ್ಲ. "ಅಪೊಸ್ತಲರು ಸೂಚಕಕಾರ್ಯಗಳಿಂದ ಸುವಾರ್ತೆಯ ವಾಕ್ಯವನ್ನು ಬಲಪಡಿಸುತ್ತಾ ಇದ್ದರು" (ಮಾರ್ಕ 16:20). ಉಪದೇಶವು ಬಾಯಿಮಾತಿನಲ್ಲಿ ಅಥವಾ ಬರಹದಲ್ಲಿದ್ದರೂ, ಅದರಲ್ಲಿ ಯಾವ ವ್ಯತ್ಯಾಸಗಳೂ ಇರುವದಿಲ್ಲ; ಅದರಲ್ಲಿ ಅಡಗಿರುವ ಸತ್ಯವು ಯಾವಾಗಲೂ ದೃಢಗೊಂಡಿರುತ್ತದೆ.

ಇನ್ನೂ ಮುಂದೆ ಸಭೆಗೆ ಯಾವ ಸೂಚಕ ಕಾರ್ಯಗಳ ಅಗತ್ಯತೆ ಇರುವದಿಲ್ಲ. ನಮೂದಾಗಿರುವ ಸೂಚಕ ಕಾರ್ಯಗಳ ಮೂಲ ಉದ್ದೇಶಗಳು ಈಡೇರಿಸುತ್ತದೆ: ದೇವ ವಾಕ್ಯವು ದೃಢೀಕರಿಸಲ್ಪಟ್ಟಿದೆ. ಈ ದೃಢೀಕರಣದ ನಿಮಿತ್ತವಾಗಿ, ಅದ್ಭುತ ಮಾಡುವ ಸಾಮರ್ಥ್ಯವು ಇಲ್ಲದಾಗಿದೆ. ಈ ದಿನಗಳಲ್ಲಿ ಅದ್ಭುತಗಳನ್ನು ಮಾಡುತ್ತೇವೆ ಮತ್ತು ಅನ್ಯ ಭಾಷೆಯಲ್ಲಿ ಮಾತನಾಡುತ್ತೇವೆ ಎಂಬುದಾಗಿ ಹೇಳುವವರು ಯೇಸುವಿನ ಕಾಲದಲ್ಲಿ ಜೀವಿ ಸಿದ್ದ ಯೆಹೂದ್ಯರಂತಿರುವರು ಹಳೆಯ ಕಾಲಾತೀತವಾದ ಧರ್ಮಶಾಸ್ತ್ರಕ್ಕೆ ಯೆಹೂದ್ಯರು ಅಂಟಿಕೊಂಡಿದ್ದರು (ಇಬ್ರಿಯ 8:13); ಧರ್ಮಶಾಸ್ತ್ರವು ತನ್ನ ಕೆಲಸವನ್ನು ಪೂರ್ಣ ಮಾಡಿದ್ದರೂ (ಲೂಕ 24:44, 45), ಅದೇ ರೀತಿಯಲ್ಲಿ, ಅದ್ಭುತ ಮಾಡುತ್ತೇವೆ ಎನ್ನುವವರು, ಈಗಾಗಲೇ ಮುಗಿದಿರುವ ಅದ್ಭುತ ಕಾರ್ಯಗಳಿಗೆ ಇನ್ನೂ ಅಂಟಿಕೊಂಡಿರುವರು. ದೇವರ ಪ್ರಕಟನೆಯು

ಅಂತ್ಯಗೊಳ್ಳುವಾಗ, ಅದ್ಭುತ ಕಾರ್ಯಗಳೂ ಇಲ್ಲದಂತಾಗುವವು ಎಂದು ಪೌಲನು ತಿಳಿಸಿರುವನು 1 ಕೊರಿಂಥ 13:8-10.

ಅಪೊಸ್ತಲರು ಮಾತ್ರ ಅದ್ಭುತಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ್ದರು, ಆದರೆ ಈ ದಿನಗಳಲ್ಲಿ ಆವಿಧವಾದ ಯಾವುದೇ ಅಪೊಸ್ತಲರು ಇರುವದಿಲ್ಲ. ಅಪೊಸ್ತಲರ ಕೃತ್ಯಗಳು 2 ಮತ್ತು 10ರಲ್ಲಿ ದೇವರಿಂದ ನೇರವಾಗಿ ಬಂದ ಅದ್ಭುತಗಳ ಕುರಿತು ತಿಳಿಸಲ್ಪಟ್ಟಿದೆಯೇ ವಿನಃ, ಕೈಗಳನ್ನಿಡುವದರಿಂದ ದೊರೆಯುವ ಅದ್ಭುತಗಳ ಕುರಿತು ತಿಳಿಸಿರುವದಿಲ್ಲ. ಪೇತ್ರನು ಈ ಅದ್ಭುತಗಳ ಕುರಿತು “ಒಂದೇ ವರವನ್ನು ದೇವರು ನೀಡಿರುವನು” ಎಂದು ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 11:17); ಈ ಎರಡು ವಿಚಾರಗಳು ಬೆಂಕಿಯ ದೀಕ್ಷಾಸ್ನಾನದ ಕುರಿತಾಗಿರುತ್ತದೆ (ಮತ್ತಾಯ 3:11; ಅಪೊಸ್ತಲರ ಕೃತ್ಯಗಳು 11:15-17). ಆ ವಿಧವಾದ ದೀಕ್ಷಾಸ್ನಾನವೂ ಸಹ ಆ ದಿನಗಳಲ್ಲಿದ್ದ ಜನರ ಪಾಪಗಳನ್ನು ನಿವಾರಣೆ ಮಾಡಲಿಲ್ಲ, ಮತ್ತು ಯಾರನ್ನು ಕ್ರೈಸ್ತರನ್ನಾಗಿ ಮಾಡಲಿಲ್ಲ. ಪರಿಶುದ್ಧಾತ್ಮನ ದೀಕ್ಷಾಸ್ನಾನವನ್ನು ವಿಶೇಷವಾದ ಉದ್ದೇಶಕ್ಕಾಗಿ ನೀಡಲಾಯಿತು: ಅಪೊಸ್ತಲರು ದೇವರ ಕಾರ್ಯವನ್ನು ಮಾಡುವದಕ್ಕೆ ಅವರಿಗೆ ಸಾಮರ್ಥ್ಯವನ್ನು ನೀಡಿತು, ಮತ್ತು ಅನ್ಯರನ್ನು ಸಹ ಕ್ರಿಸ್ತನ ಅನ್ಯೋನ್ಯತೆಗೆ ಸೇರಿಸಿಕೊಳ್ಳ ಬೇಕೆಂಬ ತತ್ವವನ್ನು ಯೆಹೂದ್ಯರಿಗೆ ನೀಡಿತು. ಎರಡು ಸಂದರ್ಭಗಳಲ್ಲಿಯೂ, ಈ ದೀಕ್ಷಾಸ್ನಾನದಲ್ಲಿ ಗಮನಾರ್ಹ ಪರಿಣಾಮ ಉಂಟಾಯಿತು.

ಈ ದಿನಗಳಲ್ಲಿ ದೇವರು ಏಕೆ ಅದ್ಭುತಗಳನ್ನು ಮಾಡುತ್ತಿರುವದಿಲ್ಲವೆಂಬ ಮೂರು ಅಂಶಗಳನ್ನು ಗಮನಿಸೋಣ: (1) ಅದ್ಭುತಗಳ ಉದ್ದೇಶವನ್ನು ಸಾಧಿಸಿ ಮುಗಿಸಲಾಗಿದೆ. (2) ದೇವರ ಸುವಾರ್ತೆಯ ಪ್ರಕಟನೆಗಳು ಗೋಚರವಾದಾಗ, ಅವುಗಳು ನಿಂತುಹೋದವು ಎಂದು ಪೌಲನು ತಿಳಿಸಿರುವನು. (3) ಈ ಒಂಬತ್ತು ವರಗಳನ್ನು ಸ್ವೀಕರಿಸುವ ನಿಯಮಗಳು ಈ ದಿನಗಳಲ್ಲಿ ಇರುವದಿಲ್ಲ, ಯಾಕೆಂದರೆ ಅದನ್ನು ನಡಿಸುತ್ತಿದ್ದ ಅಪೊಸ್ತಲರೆಲ್ಲರೂ ಮರಣವನ್ನು ಹೊಂದಿರುವರು.

## ಮುಕ್ತಾಯ

ದೇವರ ವಾಕ್ಯವು ಮಾತ್ರ ಮನುಷ್ಯನನ್ನು ಅವನ ಪಾಪದ ದಾಸತ್ವದಿಂದ ಬಿಡುಗಡೆ ಮಾಡುವದು (ಯೆಶಾಯ 8:31, 32). ಸತ್ಯವೇದದ ಉಪದೇಶದ ಬಗ್ಗೆ ಅಪೊಸ್ತಲರ ಕೃತ್ಯಗಳು ಮಾತ್ರ ತಿಳಿಸುತ್ತದೆ. ದೇವರ ಶಕ್ತಿಯಿಂದ ಅದ್ಭುತಗಳು ಜರುಗಿದ ಕಾರಣ, ದೇವರು ಅವರನ್ನು ಸತ್ಯಕ್ಕೆ ನಡಿಸಿದನು. ಆ ಸತ್ಯಕ್ಕೆ ಒಳಗಾಗುವ ಮುಖಾಂತರ ಅವರು ದೇವರ ಕೃಪೆಗೆ ಪಾತ್ರರಾದರು.

---

ಟಿಪ್ಪಣಿಗಳು

[1]1, 2 ತಿಮೊಥೆ; ತೀತ, ಇಬ್ರಿಯ; 1, 2 ಪೇತ್ರ; 1, 2, 3, ಯೋಹಾನ; ಯೂದ; ಮತ್ತು ಪ್ರಕಟಣೆಯ ರಚನೆಗಳನ್ನು ಒಳಗೊಂಡಿದೆ. [2]ಒಬ್ಬೊಬ್ಬ ಅಪೊಸ್ತಲಿಗೂ ಈ ಒಂಭತ್ತು ವರಗಳು ಇದ್ದವೆಂದು ಸೂಚಿಸುತ್ತವೆ. ಇತರ ಅಪೊಸ್ತಲರೊಂದಿಗೆ ಪೌಲನು ಸಾಮಾನನೆಂದು ರುಜುವಾತು ಮಾಡಲು “ಅಪೊಸ್ತಲನಿಗೆ ಇರತಕ್ಕ ಲಕ್ಷಣಗಳು” ಪೌಲನ ಸಾಮರ್ಥ್ಯಗಳನ್ನು ಪಡೆದಿರುವನೆಂದು ಹೇಳಿಕೊಂಡೆನು (2 ಕೊರಿಂಥ 12:11, 12). ಈ ಒಂಭತ್ತು ವರಗಳು ಕೊರಿಂಥದಲ್ಲಿ ಇದ್ದವು ಮತ್ತು ಅಪೊಸ್ತಲರಲ್ಲಿ ಒಬ್ಬನೇ ಕೊರಿಂಥದಲ್ಲಿ ಇದ್ದವನು. ಕೊರಿಂಥ ಸಭೆಯಲ್ಲಿ ಇರುವವರು ಅಪೊಸ್ತನಿಂದ ಈ ವರಗಳನ್ನು ಪಡೆದಿರುವನು.